ನಿಲ್ಲಬೇಕು. ತಾವು ಬಹಳಷ್ಟು ಮಹತ್ವದ ವಿಷಯಗಳು ಇವೆಯೆಂದ ಮೇಲೆ, ನಾನು ಅವಕಾಶ ಮಾಡಿ ಕೊಡುತ್ತೇನೆ. ದಯಮಾಡಿ ನಾನು 2 ನಿಮಿಷಕ್ಕೆ ಬೆಲ್ ಹೊಡೆಯುತ್ತೇನೆ, ತಾವೂ ಅಲ್ಲಿಗೆ ಮುಗಿಸಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳುವುದಕ್ಕೆ ಒಪ್ಪಿಕೊಳ್ಳುತ್ತೇನೆ. ಆದರೂ ಹಿರಿಯ ಸದಸ್ಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆಯಬೇಕಲ್ಲವೇ.

ಉಪಾಧ್ಯಕ್ಷರು : ತಾವು ಉಪನಾಯಕರಿದ್ದೀರಿ, ತಮ್ಮ ಮಾರ್ಗದರ್ಶನ ಅವರಿಗೆ ಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗೆಯೇ ವಾಟಾಳ್ ನಾಗರಾಜ್‌ರವರ ಮಾರ್ಗದರ್ಶನವೂ ಬೇಕು.

ಉಪಾಧ್ಯಕ್ಷರು : ಈಗ ಮಾನ್ಯ ವಾಟಾಳ್ ನಾಗರಾಜ್ ಅವರೇ, ತಾವು ಪ್ರಸ್ತಾಪ ಮಾಡಿ, ಸರ್ಕಾರದಿಂದ ಉತ್ತರಕೊಡಿಸುತ್ತೇನೆ. 2 ನಿಮಿಷದಲ್ಲಿ ತಾವು ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ ನನಗೆ ತಮ್ಮ ಮನ ನೋಯಿಸಬೇಕೆನ್ನುವ ಇಚ್ಛೆ ಇಲ್ಲ.

ಉಪಾಧ್ಯಕ್ಷರು : ನನಗೂ ತಮ್ಮ ಮನ ನೋಯಿಸಬೇಕೆನ್ನುವ ಇಚ್ಛೆ ಇಲ್ಲ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಚಾಮರಾಜನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ಚಾಮರಾಜನಗರ ತಾಲ್ಲೂಕು ಚಾಮರಾಜನಗರ ಕ್ಷೇತ್ರದ ಬಗ್ಗೆ ಒಂದು ಸಾರಿ ಅಲ್ಲ, ನಾಲ್ಕೈದು ಸಾರಿ ಇಲ್ಲಿ ಹೇಳಿದ್ದೇನೆ. ಅಲ್ಲಿ ಕನಿಷ್ಠ ಒಂದು ಕ್ಷೇತ್ರದಲ್ಲಿ 300 ಕೊಳವೆ ಬಾವಿಗಳು ಕೆಟ್ಟಿವೆ. ಭೀಕರವಾದ ಬಿಸಿಲು ಬೇಗೆ ತಡೆಯುವುದಕ್ಕೆ ಆಗುತ್ತಿಲ್ಲ. ಅದು ಬಹಳ ಹಿಂದುಳಿದ ಮತ್ತು ಗಡಿಪ್ರದೇಶ. ನೀರು ತೀರಾ ತಳಕ್ಕೆ ಹೊರಟು ಹೋಗಿದೆ. ಈ ಬಗ್ಗೆ ಕನಿಷ್ಠ ರಿಪೇರಿ ಮಾಡಿಸಿಕೊಡಿ ಎಂದು ಹೇಳಿ ನಾಲ್ಕಾರು ಬಾರಿ ಹೇಳಿದ್ದು ಆಯಿತು. ಸರ್ಕಾರ ಈ ಸದನದಲ್ಲಿ ನನಗೆ ಒಂದು ಭರವಸೆಯನ್ನು ಸಹ ಕೊಟ್ಟರು. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟರು ನಾನು ಈ ಕೂಡಲೇ ಅಧಿಕಾರಿಗಳ ಒಂದು ತಂಡವನ್ನು ಅಲ್ಲಿಗೆ ಕಳುಹಿಸುತ್ತೇನೆ. ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ಆ ವರದಿ ಬಂದ ತಕ್ಷಣ ನಾನು ಈ ಬಗ್ಗೆ ತೀವ್ರವಾದ ಗಮನವನ್ನು ಕೊಡುತ್ತೇನೆಂದು. ನಾನು ಈ ಬಗ್ಗೆ ನಾಲ್ಕಾರು ಬಾರಿ ಕೇಳಿದರೂ ಇದುವರೆಗೂ ಅವರ ಗಮನ ಕೊಡಲಿಲ್ಲ. ಒಂದು ಕಡೆ ಅಲ್ಲಿ ಕುಡಿಯುವ ನೀರಿನ ಅಭಾವ ಪರಿಸ್ಥಿತಿ ನಿರ್ಮಾಣ ಆಗಿದೆ. ಒಂದು ಕಡೆ ಬೇಸಿಗೆ ಬೇಗೆ. ಒಂದು ಕಡೆ ಮಳೆ ಇಲ್ಲ. ಒಂದು ಕಡೆ ಸುವರ್ಣಾವತಿ ನದಿ ಒಣಗುತ್ತಿದೆ. ಆ ಗಡಿಪ್ರದೇಶದಲ್ಲಿ ವಿದ್ಯುಚ್ಛಕ್ತಿ ಪರಿಸ್ಥಿತಿ ಹದೆಗೆಟ್ಟಿದೆ. ಆ ಜನರ ಕಣ್ಣೀರಿನ ಕಥೆಯನ್ನು

ನಾನು ಇಲ್ಲಿ ಹೇಳುತ್ತಿದ್ದೇನೆ. ನನ್ನಂತಹವರು ಇಲ್ಲಿ ಇದ್ದು ಆ ಜನರ ಪರಿಸ್ಥಿತಿ ಆ ರೀತಿ ಆದರೆ ಸರ್ಕಾರಕ್ಕೆ ಇನ್ನು ಏನು ಹೇಳಬೇಕು ಎನ್ನತಕ್ಕಂಥಾ ಪ್ರಶ್ನೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತಿದ್ದೇನೆ. ಸರ್ಕಾರ ಸುಮ್ಮನೇ ಯಾವುದೋ ಒಂದು ರೀತಿಯ ಭರವಸೆ ಕೊಟ್ಟರೆ ಆಗುವುದಿಲ್ಲ. ಇದುವರೆಗೂ ಆದಂತಹ ವಿಚಾರಗಳು ಏನು? ನಾಲ್ಕಾರು ಬಾರಿ ನಾವು ಕೇಳಿದ ಮೇಲೆ ಸರ್ಕಾರದ ಅದರ ಬಗ್ಗೆ ಕೈಗೊಂಡಂತಹ ಕ್ರಮಗಳು ಏನು? ಕುಡಿಯುವ ನೀರನ್ನು ಈಗ ಎರಡು ದಿವಸಕ್ಕೆ ಒಂದು ಸಾರಿ ಬಿಡುತ್ತಿದ್ದಾರೆ. ಒಂದು ಕಡೆ ವಿದ್ಯುತ್ ಇಲ್ಲ. ಈ ಬಗ್ಗೆ ನನಗೆ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ವಾಟಾಳ್ ನಾಗರಾಜ್ ಅವರು ಮೊದಲೇ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದ್ದರೆ ಸರ್ಕಾರ ಸಂಬಂಧಪಟ್ಟಂತಹ ಮಂತ್ರಿಗಳು ಇರುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ನನ್ನ ಹತ್ತಿರ ಇರುವ ಪಟ್ಟಿಯಲ್ಲಿ ಅವರ ಹೆಸರು ಸಹ ಇಲ್ಲ.

ಉಪಾಧ್ಯಕ್ಷರು : ಅವರು ಆಮೇಲೆ ಬಂದು ಅಧ್ಯಕ್ಷರಲ್ಲಿ ವಿನಂತಿ ಮಾಡಿದದಾರೆ ಅದಕ್ಕೆ ಕೆಳಗಡೆ ಅವರ ಹೆಸರು ಇದೆ.

ಶ್ರೀ ಸಿ. ಭೈರೇಗೌಡ : ನಾನು ಗ್ರಾಮೀಣಾಭಿವೃದ್ಧಿ ಮತ್ತು ವಿದ್ಯುತ್ ಖಾತೆಗಳ ಸಚಿವರನ್ನು ಕಂಡು ಮಾತನಾಡಿ ಅವರಿಗೆ ವಿಷಯ ತಿಳಿಸುತ್ತೇನೆ.

ಉಪಾಧ್ಯಕ್ಷರು : ತಾವು ನೋಟೀಸ್ ಕೊಟ್ಟಿಲ್ಲ. ತಾವು ಹಾಗೆ ಬಂದು ಹೇಳಿದ್ದೀರಿ ಬರೆದು ಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ತಾವು ಬರೆದುಕೊಂಡ ಮೇಲೆ ನಾವು ನೋಟೀಸ್ ಕೊಟ್ಟಿದ್ದೇವೆಂದು ಅರ್ಥ. ಭೈರೇಗೌಡರೇ ತಾವು ನನ್ನ ಕ್ಷೇತ್ರಕ್ಕೆ ಬಂದಿದ್ದೀರಿ. ತಾವು ಮತ್ತು ಚಂದ್ರೇಗೌಡರು ನಮ್ಮ ಕ್ಷೇತ್ರಕ್ಕೆ ಬಂದಿದ್ದೀರಿ.

ಶ್ರೀ ಸಿ. ಭೈರೇಗೌಡ : ಒಳ್ಳೆಯ ಊಟ ಸಹ ಹಾಕಿಸಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ನಾವು ಎಲ್ಲರಿಗೂ ಒಳ್ಳೆಯ ಊಟ ಹಾಕಿಸುತ್ತೇವೆ. ಅದೂ ನಿಮಗೆ ಒಳ್ಳೆಯ ಊಟ ಹಾಕಿಸದೇ ಇರುತ್ತೇವೆಯೇ ಆ ಪ್ರಶ್ನೆ ಬೇರೆ. ಈಗ ಇಲ್ಲಿ ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆ. ಅಲ್ಲಿ ಪುಣಜೂರು ರಸ್ತೆ ಕುಲಗೆಟ್ಟು ಹೋಗಿದೆ. ಆ ರಸ್ತೆ ನಾಶವಾಗಿದೆ. ಅದೊಂದು ನರಕ ಆಗಿದೆ. ನಾನು ಇವರಿಗೆ ಏನು ಹೇಳಿದರೂ ಸಹ ಗೋರ್ಕಲ್ಲಿನ ಮೇಲೆ ಮಳೆ ಸುರಿದಂತೆ. ಏನೂ ಆಗುವುದಿಲ್ಲ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಪುಣಜೂರು ರಸ್ತೆಗೆ 2.37 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆದು ಆಗಿದೆ. ಕೆಲಸವನ್ನು ಗುತ್ತಿಗೆದಾರರಿಗೆ ವಹಿಸಿ ಕೊಡಲಾಗಿದೆ.

ಎರಡು ಕಿಲೋಮೀಟರ್ ರಸ್ತೆ ನಿಧಾನವಾಗಿರುವುದರಿಂದ ಅವರನ್ನು ಕರೆದು ಈಗಾಗಲೇ ಚರ್ಚೆ ಮಾಡಿ ಶೀಘ್ರವಾಗಿ ಮುಗಿಸಿಕೊಡುವಂತೆ ಆದೇಶ ನೀಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಇಲ್ಲಿ ಒಂದು ಉತ್ತರ ಕೊಟ್ಟಿದ್ದಾರೆ. ಎರಡು ಸಾವಿರ ವರ್ಷಕ್ಕೆ ಮುಗಿಸುತ್ತೇವೆಂದು.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಉಪಾಧ್ಯಕ್ಷರೇ, ಕೇಂದ್ರ ಭೂಸಾರ ಸಚಿವರ ಅನುಮತಿ ಮೇರೆಗೆ ಮಂಜೂರಾಗಿರುವಂತಹ ಯೋಜನೆಗೆ 2.37 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಬೇಕಾದರೆ ಅದಕ್ಕೆ ಹಂತಹಂತವಾಗಿ ಹಣ ಬಿಡುಗಡೆಯಾಗುತ್ತದೆ ಎರಡು ಸಾವಿರ ಇಸವಿ ಒಳಗೆ ಮುಗಿಸಬೇಕಾಗಿದೆ. ಅದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ. ಇದು ಒಂದೇ ರಸ್ತೆಗೆ ಅಲ್ಲ. ರಾಜ್ಯದಲ್ಲಿರುವಂತಹ 10 ರಸ್ತೆಗಳಿಗೆ ಈ ರೀತಿಯ ಮಂಜೂರಾತಿ ದೊರೆತಿದೆ. ತಮ್ಮ ಭಾಗದಲ್ಲಿ ಈ ರೀತಿಯ ಒಂದು ಕೆಲಸ ನಡೆಯುತ್ತಿದೆ ಎನ್ನುವುದು ತಮ್ಮ ಗಮನದಲ್ಲಿದೆ. ಮಾನ್ಯ ಸದಸ್ಯರು ಪದೇ ಪದೇ ಹೇಳುತ್ತಿದ್ದಾರೆ. ತಮ್ಮ ಜೊತೆಯಲ್ಲಿಯೇ ಇಲಾಖಾಧಿಕಾರಿಗಳನ್ನು ಕರೆದು ಚರ್ಚೆ ಮಾಡಿದ್ದು ಅವರ ಗಮನದಲ್ಲಿದೆ. ರಸ್ತೆ ಹದಗೆಟ್ಟಿರುವ ಬಗ್ಗೆ ಅವರು ಬಹಳಷ್ಟು ಖೇದವನ್ನು ವ್ಯಕ್ತಪಡಿಸುತ್ತಿದ್ದಾರೆ. ಆ ರಸ್ತೆಯನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ ಶೀಘ್ರವಾಗಿ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಮತ್ತು ಇಂಧನ ಖಾತೆಯ ಸಚಿವರ ಗಮನಕ್ಕೆ ಈ ವಿಷಯವನ್ನು ತಂದು ಆದಷ್ಟು ಜಾಗ್ರತೆಯಾಗಿ ಇದನ್ನು ಸರಿಪಡಿಸುವಂತಾದ್ದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ನಾನು ಮಾನ್ಯ ಸದಸ್ಯರಿಗೆ ನೀಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮಗೆ ಬೇಜಾರು ಮಾಡಬೇಕು ಎನ್ನುವಂತಹ ಉದ್ದೇಶ ನನಗೆ ಇಲ್ಲ. ನಾನಂತೂ ಇದನ್ನು ಪ್ರತಿಭಟನೆ ಮಾಡಿ ಇಡೀ ದಿನ ಇಲ್ಲಿ ಕುಳಿತುಕೊಳ್ಳುತ್ತೇನೆ. ಇದರಲ್ಲಿ ನನ್ನದೇನೂ ತಕರಾರು ಇಲ್ಲ. ತಾವು ಬೇಕಾದರೆ ಸಭೆ ನಡೆಸಬಹುದು. ಸರ್ಕಾರ ಇಷ್ಟೊಂದು ಬೇಜವಾಬ್ದಾರಿತನದಿಂದ ವರ್ತಿಸಿದರೆ ಹೇಗೆ?

ಉಪಾಧ್ಯಕ್ಷರು : ತಾವು ನೋಟೀಸ್ ಕೊಟ್ಟಿಲ್ಲ. ತಾವು ಅಧ್ಯಕ್ಷರಿಗೆ ಭೇಟಿ ಆಗಿ ಹೇಳಿದ್ದೀರಿ. ಅಷ್ಟರಲ್ಲಿ ಅವರು ಹೇಗೆ ಉತ್ತರ ತಯಾರು ಮಾಡಬೇಕು. ಮಂತ್ರಿಗಳು ಇಲ್ಲ. ಇನ್ನು ಯಾವ ರೀತಿಯಲ್ಲಿ ಮಾಡಬೇಕೆಂದು ತಾವೇ ಹೇಳಿ. ಈ ರೀತಿ ಆದರೆ ನಾವು ಸದನ ಯಾವ ರೀತಿ ನಡೆಸುವುದು?

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ನಾನು ತಮ್ಮ ಮನವನ್ನು ಒಲಿಸುತ್ತೇನೆ.

ಉಪಾಧ್ಯಕ್ಷರು : ದಯಮಾಡಿ ಕೇಳಿ. ತಾವು ನಿನ್ನೆಯ ದಿವಸ ನೋಟೀಸ್ ಕೊಟ್ಟಿದ್ದರೆ ಅವರು ಇವತ್ತು ಉತ್ತರ ರೆಡಿ ಮಾಡಿಕೊಂಡು ಬಂದು ಒದಗಿಸುತ್ತಿದ್ದರು. ತಾವು ಈ ಸದನಕ್ಕೆ ಬಂದ ಮೇಲೆ ಸರ್ಕಾರದ ಗಮನಕ್ಕೆ ವಿಷಯ ತಂದಿದ್ದೀರಿ. ಈಗ ಸರ್ಕಾರ ಅಷ್ಟಕ್ಕೆ ಉತ್ತರ ಕೊಟ್ಟಿದ್ದಾರೆ ನಾಳೆ

ಸೋಮವಾರದ ದಿನ ನಾನೇ ತಮಗೆ ಉತ್ತರ ಕೊಡಿಸುತ್ತೇನೆ. ದಯಮಾಡಿ ಸಹಕಾರ ಮಾಡಿ. ನಿಮ್ಮ ಮನಸ್ಸು ತುಂಬುವಂತೆ ನಾನು ಉತ್ತರ ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ.

ಉಪಾಧ್ಯಕ್ಷರು : ಬೇಡ, ನಾನು ತಮಗೆ ಕೈ ಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಕೈ ಮುಗಿದರೆ ನಾನು ಸಾಷ್ಟಾಂಗ ನಮಸ್ಕಾರ ಮಾಡಿಬಿಟ್ಟೆ.

ಉಪಾಧ್ಯಕ್ಷರು : ಮತ್ತೆ ನಾನು ತಮಗೆ ಯಾವ ರೀತಿ ಹೇಳುವುದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಮ್ಮ ಕ್ಷೇತ್ರದ ಬಗ್ಗೆ ಸಂಪೂರ್ಣವಾಗಿ ಗೊತ್ತಿರತಕ್ಕಂಥ ಮಾನ್ಯ ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಇದ್ದಾರೆ ಅವರೇ ಹೇಳಲಿ ಸ್ವಾಮಿ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಬೇಕು. ಸೋಮವಾರ ಉತ್ತರ ಕೊಡಿಸುತ್ತೇನೆ.

ಚಾಮರಾಜನಗರದ ಹೊಂಗನೂರು ಗ್ರಾಮದ ಟ್ಯಾಂಕ್ ಬಗ್ಗೆ ಪ್ರಸ್ತಾಪ

ಶ್ರೀ ಎ.ಆರ್. ಕೃಷ್ಣಮೂರ್ತಿ : ಮಾನ್ಯ ಉಪಾಧ್ಯಕ್ಷರೇ ನಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಹೊಂಗನೂರು ಗ್ರಾಮದಲ್ಲಿರತಕ್ಕಂಥಾ ಹಿರೇಕೆರೆ ಟ್ಯಾಂಕ್‌ಗೆ ಕೆರೆಯ ಜಲಾಶಯ ಪ್ರದೇಶದಲ್ಲಿ ಬರುವ ಬೆಲ್ಲತ್ತ ಜಲಾಶಯವನ್ನು ನಿರ್ಮಿಸುವುದಕ್ಕಿಂತ ಮುಂಚೆ ಕೆರೆಗೆ ಬಹಳಷ್ಟು ನೀರು ಶೇಖರಣೆ ಆಗುತ್ತಿತ್ತು. ಸುಮಾರು ಎರಡು ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಕೆರೆಯು ಸರಿಯಾಗಿ ಅಭಿವೃದ್ಧಿ ಹೊಂದದೇ ಮತ್ತು ಈ ಒಂದು ಅಚ್ಚುಕಟ್ಟು ಪ್ರದೇಶದಲ್ಲಿ ನೀರು ಸರಿಯಾಗಿ ಶೇಖರಣೆ ಆಗದೇ ಸುಮಾರು ಎರಡು ಸಾವಿರ ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ತೊಂದರೆ ಆಗಿದೆ ಆದ್ದರಿಂದ ನಾನು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಒಂದು ಹೊಂಗನೂರು ಗ್ರಾಮದ ಹಿರೇಕೆರೆ ಎಂಬ ಕೆರೆಗೆ ಏತನೀರಾವರಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಸರ್ಕಾರದ ಮುಂದೆ ಈ ಒಂದು ಏತನೀರಾವರಿ ಯೋಜನೆ ಇದ್ದರೆ ಅದರ ಅಂದಾಜು ವೆಚ್ಚ ಎಷ್ಟು? ಮತ್ತು ಆ ಯೋಜನೆಯನ್ನು ಜರೂರಾಗಿ ಮುಗಿಸಿಕೊಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ ಚಾಮರಾಜನಗರ ತಾಲ್ಲೂಕು ಹೊಂಗನೂರು ಗ್ರಾಮದಲ್ಲಿ ಹಿರೇಕೆರೆ ಟ್ಯಾಂಕ್ ಎಂದು ಒಂದು ಇದೆ. ಅಲ್ಲಿ ಸುಮಾರು ಎರಡು ಸಾವಿರ ಎಕರೆ ಪ್ರದೇಶ ಅಚ್ಚುಕಟ್ಟು ಇತ್ತು. ಮೇಲೆ ಒಂದು ಟ್ಯಾಂಕ್ ಮಾಡಿದ್ದರಿಂದ ಹಾಲಿ ಅಚ್ಚುಕಟ್ಟಿಗೆ ತೊಂದರೆ ಆಗಿದೆ ಎನ್ನುವಂತಹ ಒಂದು ವಿಚಾರ ಇದೆ. 1997ರಲ್ಲಿ ಅದಕ್ಕೆ ಒಂದು ಸರ್ವೇ ನಡೆದಿದೆ. ತನಿಖಾ ಕಾರ್ಯಕ್ರಮ ಎಲ್ಲಾ ಮಾಡುತ್ತಿದ್ದಾರೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳಿಂದ ಕಬಿನಿ ಬಲದಂಡೆ ನಾಲೆಯಿಂದ 148ನೇ ಕಿಲೋಮೀಟರ್‌ನಲ್ಲಿ ಹಣ ಮಂಜೂರು ಮಾಡಿ ಈ ಕಾಮಗಾರಿಯನ್ನು ಈ ವರ್ಷ ಪ್ರಾರಂಭಿಸಲು ಪ್ರಯತ್ನ ಮಾಡುತ್ತೇವೆ.